## ಹಣ್ಣೆಲೆ ನಕ್ಕಾಗ

ಮರವೇನು ಮಣ್ಣೇನು
ಮತ್ತೇನು; ಕಾಡುವ ಕಾಡು
ಹಾಡಾಗುತ್ತದೆ ಈ ನಾಡು
ನಮ್ಮ ನಿಮ್ಮೆಲ್ಲರ ಪಾಡು
ಒಂದೆಲೆಯೂ ಸಾಕು
ಇನ್ನೇನು ಉದುರಿ ಬೀಳಬೇಕು
ಹಸಿರೆಲೆಯ ನಡುವೆ ಹಣ್ಣೆಲೆಯೂ
ನಕ್ಕು ನಗಿಸುವ ಹೆಮ್ಮೆಯೂ
ಮಣ್ಣು ಸೇರುವ ಹೊತ್ತಿಗೆ
ಜೀವಜಲ ಬತ್ತಿದರೂ ಒತ್ತರಿಸಿ
ಮಾಸದ ನಗೆ ಹನಿಗಳು
ನೀರಬಿಂದುಗಳ ಮುತ್ತುಗಳು
ಯೌವನದ ಮಜಲು ತಾರುಣ್ಯ
ಮುಪ್ಪಾದರೂ ಸಹಜ ಸೋಜಿಗ
ಮುಪ್ಪು ಯೌವನದ ನಡುವೆ
ಜೀವಕ್ಕೆ ಜೀವದ ಕಾರುಣ್ಯ
ಬಾಳಿ ಬದುಕಿದ ಧೀಮಂತ
ಹಸಿರು ಉಸಿರು ಎನ್ನುತ್ತಾ
ಎಲ್ಲಾ ಮಜಲುಗಳ ದಾಟಿ
ಮಣ್ಣಿನ ಒಳಗೆ ಮಣ್ಣಾಗುವತ್ತ
ಅಜ್ಜ ಬೇಂದ್ರೆ ಹೇಳಿದ
ಹಾಡಾಗುವದಕ ಹೆಚ್ಚಿಗೇನು ಬೇಕ
ಕೊರಡಾದರೂ ಸಾಕ
ಕವಿತೆ ಹುಟ್ಟುವುದಕ್ಕ

**ವಿ.ಕೆ.ಸಂಕನಗೌಡ**

## ಕಿರೀಟ

ಬಣ್ಣ ಮಾಸಿದ್ದರೇನು?
ನಾ ಹೊತ್ತ ಮುತ್ತಿನ
ಈ ಕಿರೀಟ
ಬೇರೆಯದೇ ಕಥೆ
ಹೇಳುತ್ತಿದೆ
ನನ್ನ ಸುಪ್ತ ಬಯಕೆ
ಮೂಲೆಗುಂಪಾಗುವ
ಮೊದಲಾದರೂ
ಈಡೇರುತ್ತಿದೆ
'ಎಲ ಎಲಾ' ಎನ್ನುವ
ಒಬ್ಬಿಬ್ಬರಾದರೂ
ಇದ್ದಾರು
ಈ ಕಿರೀಟಕ್ಕೆ
ವಾರಸುದಾರರು

ಉದುರುವ ಮುನ್ನ
ಮುಡಿಗೇರಿಸಿಕೊಳ್ಳ ಬಯಸುವವರು
ನನ್ನಂತೆಯೇ ಕನಸು
ಕಂಡವರು ಕನಸು ಕೊಂಡವರು!

**ತಲಕಾಡು ಶ್ರೀನಿಧಿ**

